ಫಾರೆಸ್ಟ್ ಇಲಾಖಾ.

ತಾರೀಖು 23ನೇ ಜೂ 1887.

ಹಾಸನದ ಡಿಸ್ಟ್ರಿಕ್ಟ್ ಮುಂಜರಾಬಾದ್ ತಾಲ್ಲೂಕಿನಲ್ಲಿ ಇರತಕ್ಕ ಇದರಡೀ ಕಂಡ ಫೋಟೀ ಫಾರೆಸ್ಟ್ಗಳು ಮತ್ತು ಪ್ಲಾಂಟೇಷ್ಗಳಲ್ಲಿ ಉತ್ಪತ್ತಿಯಾಗುವ ಇಲಾಚಿ ಮತ್ತು ಮೆಣಸನ್ನು ಗೇಣೀಮೂಲಕ ಹತ್ತು ವರುಷಗಳ ಕಾಲಕ್ಕೆ ಅಂದರೆ 1887—88ನೇ ಸರ್ಕಾರ್ ಸಾಲ್ ಲಾಗಾಯತು 1896—97ನೇ ಸರ್ಕಾರ್ ಸಾಲಿನವರಿಗೆ ಜಮಾಯಿಸುವ ಹಕ್ಕುದಾರಿ ಬಗ್ಗೆ ದರಖಾಸ್ತುಗಳು ಯಿದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1. ಬಿದುರದ ಉಡವೇದೇಖೀಲ್ ಬಿಸಲೇಫೋಟೆ ಫಾರೆಸ್ಟ್.
2. ಕಾಗನೀರೆಫೋಟೆ ಫಾರೆಸ್ಟ್.
3. ಕೆಂಪಹೊಳೆ ಮತ್ತು ಕೆಂಚನ ಕುಮರಿ ಫಾರೆಸ್ಟ್ಗಳು.
4. ಕಬ್ಬಿನಾಲೆ ಮತ್ತು ಮೇಲಗದ್ದೆಫಾರೆಸ್ಟ್ಗಳು.
5. ನಡತೊಪ್ಪಲು ಪ್ಲಾಂಟೇಷ್.

2. ದರಖಾಸ್ತುಗಳು, "ಫೋಟೆ ಫಾರೆಸ್ಟ್ಗಳು ವ ಪ್ಲಾಂಟೇಷ್ಗಳ ಇಲಾಚಿ ಮತ್ತು ಮೆಣಸಿನಗೇಣಿಗೋಸ್ಕರ ದರಖಾಸ್ತುಗಳು" ಯಂಬದಾಗಿ ಮೇಲ್ವಿಳಾಸ ಬರೆಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಗೆ 1887ನೇ ಇಸವಿ ಆಗಸ್ಟ್ 10ನೇ ಮಕ್ತುಂ ಯಾ ಅದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು 1887ನೇ ಇಸವಿ ಆಗಸ್ಟ್ 10ನೇ ಮಕ್ತುಮಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಸದರೀ ಯವರಿಂದಲಾಗಲೀ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದಲಾಗಲೀ ಆಫೀಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವದು. ದರಖಾಸ್ತುಗಳ ಆಬ್ಜೆರ್ ವಿಲೇವಾರಿಯು ಮೈಸೂರು ದೇಶದ ಫಾರೆಸ್ಟ್ ವ ಪ್ಲಾಂಟೇಷ್ಗಳ ಇನ್ಸ್ಪೆಕ್ಟರ್ಜನರಲ್ಯವರಿಗೆ ಕೇರಿಯಿರುತ್ತೆ; ಸದರೀ ಯಾವ ದರಖಾಸ್ತನ್ನಾಗಲೀ ಯಾ ತಮಾಂ ದರಖಾಸ್ತುಗಳನ್ನಾಗಲೀ ಯಾವ ಸಬಬೂ ತಿಳಿಸದೆಯೆ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಕರ್ಣಿಸಿನೋಟಿನ ಮೂಲಕವಾಗಿಯಾಗಲೀ ವಂದು ನೂರು ರೂಪಾಯಿಗಳ ತೆವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾರಾಜಮ್ಮಾಡಲ್ಪಟ್ಟ ತೆವಣಿಗಳು, ಆಯಾ ಜನಗಳಿಗೆ ಕ್ರಮವಾಗಿ ವಾಪಸ್ ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟ್ ವ ಪ್ಲಾಂಟೇಷ್ಗಳ ಇನ್ಸ್ಪೆಕ್ಟರ್ ಜನರಲ್ಯವರಿಂದ ಆಬ್ಜೆರಾಗಿ ಮಂಜೂರ್ಮಾಡಲ್ಪಡುತದೆಯೋ ಅಂಥಾ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗದಾಗಿಯಾದರೂ ಅಥವಾ ಕರ್ಣಿಸಿನೋಟುಗಳ ಮೂಲಕವಾಗಿಯಾದರೂ, ತಾನು ಮೊದಲೆ ಹಾಜರ್ಮಾಡಿರುವ ಡಿವಾಜಿಟ್ ಮೊಬಲಗು ದೇಖೀಲ್ ಗುತ್ತಿಗೆ ಮೊಬಲಗಿನ ಹತ್ತರಲ್ಲಿ ವಂದು ಭಾಗಕ್ಕೆ ಸಮನಾಗುವಂತೆ ತೆವಣಿ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರಲ್ಲಿ ಹಾಜರ್ಮಾಡಿ, ತಕ್ಕ ಛಾಪಾ ಕಾಗದ್ದಲ್ಲಿ ಮುಂದೆ ವುದಹರಿಸಲ್ಪಟ್ಟ ಷರತ್ತುಗಳಿಗೆ ಬಳಪಟ್ಟು ಬದ್ಧನಾಗಿ ಕರಾರು ಬರೆದು ಕೊಡತಕ್ಕದ್ದು; ಮತ್ತು ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಅವಶ್ಯಕವಾದ ತೇವಣಿಯನ್ನು ಹಾಜರ್ಮಾಡದಿದ್ದರೆ, ಮೊದಲೇ ಯಿಡೋಣಾದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲುಮಾಡಲ್ಪಡುವದು.

5. ಹಾಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು, ಇದರಡೀ ಕಂಡ ಷರತ್ತು ಗಳಿಗೆ ವಳಪಟ್ಟಿರತಕ್ಕದ್ದು:—

I. ಗೇಣಿ ಮೊಬಲಗು ಹತ್ತು ಸವನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟ್ ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸಲನ್ನು ಜಮಾಯಿಸುವದಕ್ಕೆ ಮುಂಚಿತವಾಗಿ ಸರಕಾರಕ್ಕೆ ಪಾವತಿ ಮಾಡಲ್ಪಡತಕ್ಕದ್ದು. ಗೇಣಿದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದುಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟು ಯಾ ಪ್ಲಾಂಟೇಷ್ ಸರ್ಕಾರ್ ಸ್ವಾಧೀನತೆಗೆ ತೆಗದುಕ್ಕೊಳ್ಳಲ್ಪಡುವದು. ಗೇಣಿದಾರನಿಂದ ಇಡಲ್ಪಟ್ಟ ತೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣಿ ವಾಯಿದೆಯು ಮುಗಿದ ತರುವಾಯ, ಗೇಣಿಯನ್ನು ರೆನ್ಯೂ ಯಾನೆ ಪುನಹಾ ಪಡೆಯುವ ಬಗ್ಗೆ ಸರ್ಕಾರದವರಿಗೆ ಯುಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣಿದಾರನಿಗೆ ಅವಕಾಶ ಕೊಡಲ್ಪಡುವದು.

III. ಗೇಣಿಯು, ಯಿಲಾಚಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ವತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ, ಇನ್ಯಾವ ತರಹೆಯ ಇತರ ಫಸಲಾಗಲೀ ಗೇಣಿಗೆ ಪಡೆದಿರುವ ಫಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು ಯಿಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬೂಳಿ ಹರಳು ಯಾ ಇತರ ಮರಗಳು ಬೆಳಿಸಕೂಡದೆಂದು ಅರ್ಥವಾಗತಕ್ಕದ್ದಲ್ಲಾ.

IV. ಫಾರೆಸ್ಟು ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಾ ಯಾವವಿಧವಾದ ಮರವೇಆಗಲೀ ಕಡಿಯಲ್ಪಡಕೂಡದು; ಮತ್ತು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚಿಗಿಡಗಳಾಗಲಿ ಮೆಣಸಿನಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚಿಗೆ ಸಾಗಿಸಲ್ಪಡಕೂಡದು. ಯಿಲಾಚಿ ಗಿಡಗಳ ಮತ್ತು ಮೆಣಸಿನಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣಿದಾರನು ಫಾರೆಸ್ಟು ಆಫೀಸರರಿಗೆ ಬರೆದು ಕೊಳ್ಳತಕ್ಕದ್ದು, ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗೆದುಕೊಳ್ಳಲ್ಪಡತಕ್ಕದ್ದು. ಗೇಣಿದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ, ಇದರಡೀ ಕಂಡ ಗೊತ್ತಾದ ಸೀನಿಯರೇಜ್ ಯಾನೆ ತೀರ್ವೆ ದರಗಳು ಯಾ ಡಿಪ್ಯೂಟಿ ಕಮ್ಮಿಷನರವರ ಯುಕ್ತನುಸಾರ ಯಿನ್ನೂ ಕಮ್ಮಿಯಾದ ದರಗಳು ಪಾವತೀ ಮಾಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು:—

		ರೂ.
ಪ್ಯೂ	ದರಮರ ವಂದಕ್ಕೆ	15
ಹೆಸವಾ	ಡಿಟೋ	10
ಕರೀಮರ	ಡಿಟೋ	8
ನಂದಿ	ಡಿಟೋ	8
ಹೆಜನಿ	ಡಿಟೋ	6
ಯಬನಿ	ಡಿಟೋ	10
ಇತರ ತಮಾಂ ತರಹೆಯ ಮರಗಳೂ	ಡಿಟೋ	$3\frac{1}{2}$
ಬೊಂಬುಗಳು	ದರ 100ಕ್ಕೆ	10

V. ಗೇಣಿದಾರನು, ಇಲಾಚಿ ಮತ್ತು ಮೆಣಸು ವಿನಾ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲೀ ಹಕ್ಕುದಾರನಾಗಿರುವದಿಲ್ಲಾ, ಮತ್ತು ಫಾರೆಸ್ಟುಗಳು ವ ಪ್ಲಾಂಟೇಷ್ಣಗಳಲ್ಲಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ, ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಆಟಂಕಪಡಿಸುವದಕ್ಕಾಗಲೀ ಗೇಣಿದಾರಗೆ ಸ್ವತಂತ್ರ ವಿರುವದಿಲ್ಲಾ; ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಫಾರೆಸ್ಟು ವ ಪ್ಲಾಂಟೇಷ್ಣಗಳಲ್ಲಿಯು ಯಾವ್ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನೂ ತಾವೆ ಉಳಿಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡೆದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಯಿಷ್ಟಾನುಸಾರ ವಿಕ್ರಯಿಸಲ್ಪಡಬಹುದು ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು ಅಂಥಾ ಪರಭಾರೆಯ ವರ್ತಮಾನವು ಡಿಪ್ಯೂಟಿ ಕಮ್ಮಿಷನರವರಿಗೆ ಅವರ ಆಫೀಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು, ಮತ್ತು ಗೇಣಿಯ ಪರಭಾರೆಯು ರೆಜಿಸ್ಟ್ರೇಷ್ಣ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಿಜಿಸ್ಟ್ರು ಮಾಡಲ್ಪಡತಕ್ಕದ್ದು.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಅಂಚೇ ಇಲಾಖಾ.

ನಂಬರ್ 167—92. ತಾರೀಖು 28ನೇ ಜುಲೈ 1887.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರೆ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೇ ಆಫೀಸುಗಳು ಸ್ಥಾಪಿಸಲ್ಪಟ್ಟಿವೆ ಯಿರುತ್ತೆ:—

ತಾಲ್ಲೂಕು.	ಅಂಚೇ ಆಫೀಸು ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ನೆಲಮಂಗಲ	ಯಲಕ್ಕಾತನಹಳ್ಳಿ.
ಮಾಗಡಿ	ತಿಪ್ಪಸಂದ್ರ